12.	ಥಣಿಸಂದ್ರ	482–07
13.	ಹೆನ್ನೂರು	140–21
14.	ನಾಗಾವರ	127–00
15.	ಸಂಪಿಗೆಹಳ್ಳಿ	256–20
16.	ಹೆಬ್ಬಾಳ	59–14

ಇ) ಅಂತಿಮ ಅಧಿಸೂಚನೆಯಲ್ಲಿ ಸೇರಿರುವ ಯಾವುದೇ ಜಮೀನನ್ನು ಡೀ ನೋಟಿಫಿಕೇಷನ್ ಮಾಡಿರುವುದಿಲ್ಲ.

246 (258) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವೀರಪ್ಪನ್ ಕಾರ್ಯಾಚರಣೆಗೆ ತಮಿಳುನಾಡು ಮತ್ತು ಕರ್ನಾಟಕ ಸರ್ಕಾರಗಳು ಮಾಡಿದ್ದ ಖರ್ಚು ಎಷ್ಟು?

ಆ) ವೀರಪ್ಪನ್ ಪತ್ತೆಗೆ ಸರ್ಕಾರಿ ಬಹುಮಾನ ಘೋಷಿಸಿತ್ತೆ; ಆ ಬಹುಮಾನ ಮೊತ್ತ ಎಷ್ಟು?

ಇ) ವೀರಪ್ಪನ್ ಹತ್ಯೆ ನಂತರ ಕರ್ನಾಟಕ ಸರ್ಕಾರ ಎಸ್.ಟಿ.ಎಫ್. ಸಿಬ್ಬಂದಿಗೆ ಘೋಷಿಸಿರುವ ಬಹುಮಾನವೆಷ್ಟು?

ಈ) ಇದಕ್ಕೂ ಮೊದಲು ಈ ಸಿಬ್ಬಂದಿಗಳಿಗೆ ನೀಡಬೇಕಾಗಿದ್ದ (ಬಾಕಿ) ಬಹುಮಾನ ಹಣವೆಷ್ಟು; ಇದನ್ನು ಬಾಕಿ ಉಳಿಸಿಕೊಳ್ಳಲು ಕಾರಣಗಳೇನು? (ವಿವರ ನೀಡುವುದು)

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ವೀರಪ್ಪನ್ ಕಾರ್ಯಾಚರಣೆಗೆ ತಮಿಳುನಾಡು ಸರ್ಕಾರ ಮಾಡಿದ ವೆಚ್ಚದ ಬಗ್ಗೆ ಮಾಹಿತಿ ಲಭ್ಯವಿಲ್ಲ. ಕರ್ನಾಟಕ ಸರ್ಕಾರ ಈ ಕಾರ್ಯಾಚರಣೆಗಾಗಿ ಡಿಸೆಂಬರ್ 2004 ರವರೆಗೆ ಒಟ್ಟು ರೂ. 37,81,01,748/– ಗಳಷ್ಟು ವೆಚ್ಚ ಮಾಡಿದೆ.

ಆ) ವೀರಪ್ಪನ್ ಪತ್ತೆ ಮತ್ತು ಹತ್ಯೆಗೆ ಕರ್ನಾಟಕ ಸರ್ಕಾರ ರೂ. 5 ಕೋಟಿ ಮೊತ್ತದ ಬಹುಮಾನವನ್ನು ಘೋಷಿಸಿದೆ.

ಇ) ವೀರಪ್ಪನ್ ಹತ್ಯೆಯ ನಂತರ ಎಸ್.ಟಿ.ಎಫ್. ಸಿಬ್ಬಂದಿಗೆ ಸೂಕ್ತ ಬಹುಮಾನ ನೀಡುವ ಬಗ್ಗೆ ಮತ್ತು ಬಹುಮಾನದ ಮೊತ್ತದ ನಿರ್ಧರಣೆಯ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಈ) ಎಸ್.ಟಿ.ಎಫ್. ಕಾರ್ಯಪಡೆಯ ಮನೋಸ್ಥೈರ್ಯವನ್ನು ಹೆಚ್ಚಿಸಲು 1996 ರಲ್ಲಿ ರೂ. 50 ಲಕ್ಷಗಳನ್ನು ಬಿಡುಗಡೆ ಮಾಡಿ ಆಗಿನ ಸಿಬ್ಬಂದಿಗೆ ವಿತರಿಸಲಾಗಿದೆ.

247 (268) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷ್ಣಾ ಅಚ್ಚುಕಟ್ಟು ಪ್ರದೇಶದ ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ಬಿರುಕು ಕಂಡು ಬಂದಿದೆಯೇ;